ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್

ALL INDIA TRADE UNION CONGRESS

ಕರ್ನಾಟಕ ರಾಜ್ಯ ಸಮಿತಿ

ನಂ. 6, ಸಿರೂರ್ ಪಾರ್ಕ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು: 560 020.

ದೂರವಾಣಿ: 080–23560497, 23560566 ಇ–mail: aituc_ksc@yahoo.com

ದಿನಾಂಕ:18.09.2026

ಪತ್ರಿಕಾ ಹೇಳಿಕೆ

ಕನಿಷ್ಠ ವೇತನ ಪರಿಷ್ಕರಣೆ ತಡೆಹಿಡಿಯುವ ಸರ್ಕಾರಿ ಸುತ್ತೋಲೆಗಳಿಗೆ ನ್ಯಾಯಾಲಯದ ತಡೆಯಾಜ್ಞೆ, ಎಐಟಿಯುಸಿ ಸ್ವಾಗತ

ರಾಜ್ಯದ ಲಕ್ಷಾಂತರ ಕಾರ್ಮಿಕರ ಕನಿಷ್ಠ ವೇತನ ಪರಿಷ್ಕರಣೆಯನ್ನು ತಡೆಹಿಡಿಯಲು ಆರ್ಥಿಕ ಇಲಾಖೆ, ವಾಣಿಜ್ಯ ಇಲಾಖೆ ಹಾಗೂ ಮತ್ತಿತರ ಸರ್ಕಾರಿ ಇಲಾಖೆಗಳು ಹಾಗೂ ಸಂಸ್ಥೆಗಳು ಹೊರಡಿಸಿದ್ದ ಸುತ್ತೋಲೆಗಳ ವಿರುದ್ಧ ಎಐಟಿಯುಸಿ ಕರ್ನಾಟಕ ರಾಜ್ಯ ಸಮಿತಿ ಹಾಗೂ ಇತರ ಕಾರ್ಮಿಕ ಸಂಘಟನೆಗಳು ನಡೆಸಿದ ಕಾನೂನು ಹೋರಾಟಕ್ಕೆ ಮಹತ್ವದ ಮುನ್ನಡೆ ದೊರೆತಿದೆ. Writ Petition No. 29334/2026 ಅರ್ಜಿಯ ವಿಚಾರಣೆಯಲ್ಲಿ ಗೌರವಾನ್ವಿತ ನ್ಯಾಯಾಲಯವು ಸಂಬಂಧಿತ ಸುತ್ತೋಲೆಗಳ ಜಾರಿಗೆ ಇಂದು ತಡೆಯಾಜ್ಞೆ ನೀಡಿದೆ. ಇದನ್ನು ಎಐಟಿಯುಸಿ ಕಾರ್ಮಿಕರ ಹೋರಾಟದ ಮಹತ್ವದ ನ್ಯಾಯಾಂಗ ಜಯವೆಂದು ಸ್ವಾಗತಿಸುತ್ತದೆ.

ಕನಿಷ್ಠ ವೇತನ ಪರಿಷ್ಕರಣೆಯನ್ನು ಸರ್ಕಾರದ ಅಧಿಸೂಚನೆಯ ಮೂಲಕ ನಿಗದಿಪಡಿಸಿದ ನಂತರ, ಅದನ್ನು ವಿವಿಧ ಸುತ್ತೋಲೆಗಳ ಮೂಲಕ ತಡೆಹಿಡಿಯುವ ಪ್ರಯತ್ನವನ್ನು ಎಐಟಿಯುಸಿ ಆರಂಭದಿಂದಲೂ ತೀವ್ರವಾಗಿ ವಿರೋಧಿಸುತ್ತಾ ಬಂದಿದೆ. ಕಾರ್ಮಿಕರ ಕಾನೂನುಬದ್ಧ ವೇತನವನ್ನು ಯಾವುದೇ ಆಡಳಿತಾತ್ಮಕ ಸುತ್ತೋಲೆಯ ಹೆಸರಿನಲ್ಲಿ ಕಸಿದುಕೊಳ್ಳಲು ಅವಕಾಶ ನೀಡುವುದಿಲ್ಲ ಎಂಬ ಸ್ಪಷ್ಟ ನಿಲುವಿನೊಂದಿಗೆ ಸಂಘಟನೆ ನ್ಯಾಯಾಂಗ ಹೋರಾಟಕ್ಕೆ ಮುಂದಾಗಿತ್ತು.

ಕನಿಷ್ಠ ವೇತನವೆಂದರೆ ಕಾರ್ಮಿಕರಿಗೆ ನೀಡುವ ದಯೆಯಲ್ಲ ಅದು ಕಾರ್ಮಿಕರ ಕಾನೂನುಬದ್ಧ ಹಕ್ಕು ಮತ್ತು ಅವರ ಕುಟುಂಬದ ಬದುಕಿನ ಪ್ರಶ್ನೆ. ಬೆಲೆ ಏರಿಕೆ, ಜೀವನ ವೆಚ್ಚದ ನಿರಂತರ ಹೆಚ್ಚಳದ ನಡುವೆ ಈಗಾಗಲೇ ಕಡಿಮೆ ಆದಾಯದಲ್ಲಿ ದುಡಿಯುತ್ತಿರುವ ಕಾರ್ಮಿಕರ ವೇತನ ಪರಿಷ್ಕರಣೆಯನ್ನು ಮತ್ತಷ್ಟು ವಿಳಂಬಗೊಳಿಸುವ ಯಾವುದೇ ಕ್ರಮವನ್ನು ಎಐಟಿಯುಸಿ ಒಪ್ಪುವುದಿಲ್ಲ.

ನ್ಯಾಯಾಲಯದ ತಡೆಯಾಜ್ಞೆಯ ಹಿನ್ನೆಲೆಯಲ್ಲಿ ಸರ್ಕಾರವು ಕನಿಷ್ಠ ವೇತನ ಪರಿಷ್ಕರಣೆಯನ್ನು ತಡೆಹಿಡಿಯುವ ಎಲ್ಲಾ ಕ್ರಮಗಳನ್ನು ಕೂಡಲೇ ನಿಲ್ಲಿಸಿ, ಪರಿಷ್ಕೃತ ಕನಿಷ್ಠ ವೇತನವನ್ನು ರಾಜ್ಯದಾದ್ಯಂತ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ವಿವಿಧ ಇಲಾಖೆಗಳು ಮತ್ತು ಸರ್ಕಾರಿ ಸಂಸ್ಥೆಗಳು ಕಾರ್ಮಿಕರಿಗೆ ಪರಿಷ್ಕೃತ ವೇತನ ನೀಡುವುದನ್ನು ತಪ್ಪಿಸಲು ಯಾವುದೇ ಹೊಸ ಸುತ್ತೋಲೆ ಅಥವಾ ಆಡಳಿತಾತ್ಮಕ ಕ್ರಮಕ್ಕೆ ಮುಂದಾಗಬಾರದು ಎಂದು ಎಐಟಿಯುಸಿ ಒತ್ತಾಯಿಸುತ್ತದೆ ಮತ್ತು ಪರಿಷ್ಕೃತ ಕನಿಷ್ಠ ವೇತನವನ್ನು ತಕ್ಷಣ ಜಾರಿಗೊಳಿಸಬೇಕು ಎಂಬುದು ನಮ್ಮ ಸಂಘಟನೆಯ ಸ್ಪಷ್ಟ ಬೇಡಿಕೆಯಾಗಿದೆ.

(ವಿಜಯಭಾಸ್ಕರ ಡಿ.ಎ)
ಪ್ರಧಾನ ಕಾರ್ಯದರ್ಶಿ